**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ**
ಸಾಃ ಸುರಪುರ

**ಸಿ ಸಿ ನಂ. 144/2023**

ಪಿರ್ಯಾದಿ : ಸುರಪುರ ಪೋಲಿಸ್ ಠಾಣೆ, ಹುಣಸಗಿ

**ವಿರುದ್ಧ**

ಆರೋಪಿತರು : ರಾಮಣ್ಣ ತಂದೆ ಮಲ್ಲಪ್ಪ ಗಡದರ

**ದಂಡ ಪ್ರಕಿಯಾ ಸಂಹಿತೆ ಕಲಂ 240 (1) ರಡಿಯಲ್ಲಿ ದೋಷಾರೋಪಣೆ**

ನಾನು ಬಸವರಾಜ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಈ ಮೂಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೆಂದರೆ,

01. ರಾಮಣ್ಣ ತಂದೆ ಮಲ್ಲಪ್ಪ ಗಡದರ
ವಯಸ್ಸುಃ 32 ವರ್ಷ ಉಃ ಒಕ್ಕಲುತನ
ಸಾಃ ರತ್ತಾಳ ತಾಃ ಸುರಪುರ

ಮೊದಲನೆದಾಗಿ ದಿನಾಂಕ 28.11.2022 ರಂದು ರಾತ್ರಿ 11.00 ಗಂಟೆ ಸುಮಾರಿಗೆ ಸುರಪುರ ಪೋಲಿಸ ಠಾಣಾ ಹದ್ದಿಯ ರತ್ತಾಳ ಗ್ರಾಮದಲ್ಲಿ ಚಾಸಾ7 ರವರ ಮನೆಯ ಮುಂದೆ ಚಸಾ4 ರವರು ಬಹಿರ್ದೆಸೆಗೆಂದು ಹೋಗುತ್ತಿದ್ದಾಗ ವಿನಾಕಾರಣ ಆರೋಪಿತನಾದ ನೀನು ಚಾಸಾ4 ರವರಿಗೆ ಬಡಿಗೆಯಿಂದ ಬುಜಕ್ಕೆ ಎದೆಯ ಮೇಲೆ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 324 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಎರಡನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ4 ರವರಿಗೆ ಉದ್ರೇಖಿಸುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 504 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಕೊನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತನಾದ ನೀನು ಚಾಸಾ4 ರವರಿಗೆ ಜೀವದ ಬೆದರಿಕೆ ಹಾಕಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 506 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ.ದಾ.ನ್ಯಾ.ದಂಡಾಧಿಕಾರಿಗಳು
ಸುರಪುರ

**<u>ಆರೋಪಿತನ ಉತ್ತರ</u>**

ಪ್ರಶ್ನೆ 1) ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆ 2) ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರಃ

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

**(ಬಸವರಾಜ)**
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು.
ಸುರಪೂರ.

ಸ್ಥಳಃ ಸುರಪೂರ
ದಿನಾಂಕಃ 02.09.2025

ಆರೋಪಿತನ ಸಹಿ